**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**MVC No.1006/2025**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಪಂಚಾಕ್ಷರಿ | ಪಿಡಬ್ಲ್ಯೂ | 01 |
| ತಂದೆ ಹೆಸರು | : | ಪ್ರಕಾಶ | | |
| ವಯಸ್ಸು | : | 24 ವರ್ಷ | | |
| ಉದ್ಯೋಗ | : | ವ್ಯವಸಾಯ | | |
| ವಾಸ ಸ್ಥಳ | : | ಉದ್ರಿ | | |

**ದಿನಾಂಕ: 13.07.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ : ಅರ್ಜಿದಾರ ಪರ ಶ್ರೀ. ಆರ್ ಯು ಪಿ ವಕೀಲರಿಂದ

ನಾನು ಈ ಅರ್ಜಿಯಲ್ಲಿ ಅರ್ಜಿದಾರನಾಗಿದ್ದು ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ ಅದರಲ್ಲಿ ಬರೆದ ವಿಷಯಗಳು ನನಗೆ ತಿಳಿದಿವೆ ಮತ್ತು ಸತ್ಯವಾಗಿವೆ. ನನ್ನ ಪರವಾಗಿ ಹಾಜರುಪಡಿಸಿದ ದಾಖಲೆಗಳನ್ನು ನಿಶಾನಿಸಬೇಕೆಂದು ಕೇಳಿಕೊಳ್ಳುತ್ತೇನೆ.

| | |
|---|---|
| ನಿ ಪಿ 1 | ಆನವಟ್ಟಿ ಪಿ ಎಸ್ ಕ್ರೈಂ ನಂ. 183/2024 ರಲ್ಲಿನ FIR ನ ದೃಡಿಕೃತ ನಕಲು |
| ನಿ ಪಿ 2 | ದೂರಿನ ದೃಡಿಕೃತ ನಕಲು |
| ನಿ ಪಿ 3 | ಎಂ ವಿ ವರದಿ |
| ನಿ ಪಿ 4 | ಗಾಯದ ಪ್ರಮಾಣ ಪತ್ರ |
| ನಿ ಪಿ 5 | ಅಂತಿಮ ವರದಿ |
| ನಿ ಪಿ 6 | ಸಾಕ್ಷಿಯ ಆಧಾರಕಾರ್ಡನ ನೋಟರಿ ಪ್ರತಿಯನ್ನು ಮೂಲ ಕಾರ್ಡ ನೋಡಿ ಗುರುತಿಸಲಾಯಿತು |

ಪಾಟೀ ಸವಾಲುಃ 1 ನೇ ಎದುರುದಾರ ಪರ ಶ್ರೀ. ಎಸ್ ಎಲ್ ಬಿ ವಕೀಲರಿಂದಃ

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ನನ್ನ ಸಾಕ್ಷ್ಯಪ್ರಮಾಣ ಪತ್ರವನ್ನು ನಾನು ಓದಿ ಸಹಿ ಮಾಡಿರುತ್ತೇನೆ . ನಾನು ರಸ್ತೆಯ ಎಡಭಾಗದಿಂದ ನಡೆದುಕೊಂಡು ಹೋಗದೇ ಏಕಾಏಕಿಯಾಗಿ ರಸ್ತೆಯ ಮಧ್ಯ ಭಾಗದಲ್ಲಿ ಬಂದಿದ್ದರಿಂದ ಸದರಿ ಅಪಘಾತ ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಸದರಿ ಅಪಘಾತ 1 ನೇ ಎದುರುದಾರನ ತಪ್ಪಿನಿಂದ ಆಗಿಲ್ಲ ಹಾಗೂ ಅದು ನನ್ನ ನಿರ್ಲಕ್ಷತನದಿಂದ ಆಗಿದೆ ಎಂದರೆ ಸರಿಯಲ್ಲ. ನನ್ನ ಚಿಕಿತ್ಸೆಗೆ 2 ಲಕ್ಷ ರೂಪಾಯಿ ವ್ಯಯಿಸಿರುತ್ತೇನೆಂದು ಸುಳ್ಳು ಬರೆಯಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಶೂನ್ಯ ರೂಪಾಯಿ ಸಂಪಾದನೆ ಮಾಡುತ್ತಿದ್ದೆ ಎಂದು ನನ್ನ ಪ್ರಮಾಣ ಪತ್ರದ 5 ನೇ ಪಾರಾದಲ್ಲಿ ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ತಪ್ಪಿನಿಂದ ಆದ್ದರಿಂದ 1 ನೇ ಎದುರುದಾರನು ನನಗೆ ಪರಹಾರ ನೀಡಲು ಬಾಧ್ಯಸ್ಥನು ಎಂದರೆ ಸರಿಯಲ್ಲ.

ಪಾಟೀ ಸವಾಲುಃ 2 ನೇ ಎದುರುದಾರ ಪರ ಶ್ರೀ. ಎಸ್ ಟಿ ಕೆ ವಕೀಲರಿಂದಃ

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

**1** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ ಹಾನಗಲ್